**<u>ದಿನಾಂಕ :19-12-2020 ರಂದು ಮಧ್ಯಾಹ್ನ 12.30 ಗಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ಶಾಸಕರು, ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ಹಾಗೂ ಕರ್ನಾಟಕ ಸರ್ಕಾರದ ಕಂದಾಯ ಸಚಿವರವರಾದ ಮಾನ್ಯ ಶ್ರೀ ಆರ್.ಅಶೋಕ ರವರ ಅಧ್ಯಕ್ಷತೆಯಲ್ಲಿ ನಡೆದ 8 ವಾರ್ಡ್‌ಗಳ ವಾರ್ಡ್ ಸಮಿತಿ ಸಭೆಯ ನಡವಳಿಗಳು :-</u>**

ಕಾರ್ಯಪಾಲಕ ಅಭಿಯಂತರರು ಪದ್ಮನಾಭನಗರ ವಿಭಾಗ ರವರಾದ ಶ್ರೀ ಕಲ್ಲೇಶಪ್ಪ ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ಎಲ್ಲಾ ನೋಡೆಲ್ ಅಧಿಕಾರಿಗಳು, ಹಾಗೂ ಸಭೆಗೆ ಹಾಜರಿದ್ದ ಎಲ್ಲಾ ಇಲಾಖಾ ಅಧಿಕಾರಿಗಳನ್ನು ಪರಿಚಯಿಸುತ್ತಾ ಸ್ವಾಗತ ಕೋರಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ನೋಡೆಲ್ ಅಧಿಕಾರಿಗಳು ಹಾಗೂ ಮಾನ್ಯ ಶಾಸಕರ ಜೊತೆಯಲ್ಲಿ ಸಭೆಯನ್ನು ಆಯೋಜಿಸಲಾಗಿದ್ದು, ಪ್ರಥಮವಾಗಿ ಈ ಹಿಂದಿನ ಸಭೆಯ ನಡವಳಿಗಳ ಬಗ್ಗೆ ಚರ್ಚಿಸಿ ಈ ಬಗ್ಗೆ ವಿವಿಧ ಇಲಾಖೆಗಳಿಂದ ಕೈಗೊಂಡ ಕ್ರಮಗಳನ್ನು ಸಭೆಯ ಗಮನಕ್ಕೆ ತರಲಾಯಿತು.

ಪಾಲಿಕೆ ವತಿಯಿಂದ ವಾರ್ಡ್‌ನ ವಿವಿಧ ಭಾಗಗಳಲ್ಲಿ ಪ್ರತಿ ದಿನ ಕೋವಿಡ್ ಪರೀಕ್ಷೆಗಳನ್ನು ನಡೆಸುತ್ತಿದ್ದು, ಈ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡಿಸಲು ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಲಾಯಿತು. ಮುಂದುವರಿದು ಹಾಜರಿದ್ದ ಅಧಿಕಾರಿಗಳಿಗೆ ಸಾರ್ವಜನಿಕರಲ್ಲಿ ಎಲ್ಲರೂ ಮುಖಗವಸುಗಳನ್ನು ಕಡ್ಡಾಯವಾಗಿ ಧರಿಸಲು ಸೂಚಿಸಬೇಕೆಂದು ಮಾನ್ಯ ಶಾಸಕರು ಹಾಗೂ ಕಂದಾಯ ಸಚಿವರು ಸಲಹೆ ನೀಡಿ ಮೊದಲೇ ಆದ್ಯತೆಯನ್ನು ಕೋವಿಡ್-19 ಗೆ ಒತ್ತು ನೀಡುವಂತೆ ಎಲ್ಲಾ ನೋಡೆಲ್ ಅಧಿಕಾರಿಯವರಿಗೆ ತಿಳಿಸಲಾಗಿರುತ್ತದೆ.

1. ಬೆಸ್ಕಾಂ ಇಲಾಖೆ ವತಿಯಿಂದ ರಸ್ತೆ ಬದಿಯಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ನಿರುಪಯುಕ್ತ ವಿದ್ಯುತ್ ಕಂಬ ಹಾಗೂ ವಿದ್ಯುತ್ ಸಾಮಗ್ರಿಗಳನ್ನು ಕೂಡಲೇ ತೆರವುಗೊಳಿಸಿ 15 ದಿನದೊಳಗೆ ನಿಗಧಿತ ಸ್ಥಳದಲ್ಲಿ ಸಂಗ್ರಹಿಸಲು ಸಭೆಯಲ್ಲಿ ತಿಳಿಸಲಾಗಿರುತ್ತದೆ.

   ಬೆಸ್ಕಾಂ ಇಲಾಖೆಯಿಂದ ಕತ್ತರಿಸಲಾಗಿರುವ ಮರದ ಕೊಂಬೆಗಳನ್ನು ಕೂಡಲೇ ತೆರವುಗೊಳಿಸಲು ವಾರ್ಡ್ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ಪೀಲ್ಟ್ ಅಂಡ್ ಟ್ರ್ಯಾಕ್ಟರ್ ಅನ್ನು ಉಪಯೋಗಿಸಿಕೊಂಡು ಕತ್ತರಿಸಲಾಗಿರುವ ಮರದ ಕೊಂಬೆಗಳ ನಿಗಧಿತ ಸ್ಥಳಕ್ಕೆ ರವಾನಿಸಲು ಸೂಚಿಸಲಾಗಿರುತ್ತದೆ.

2) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇಲಾಖಾ ವತಿಯಿಂದ ಹಾಳಾಗಿರುವ ಅಥವಾ ದುರಸ್ತಿ ಪಡಿಸಿ ಉಳಿಕೆಯಾಗಿರುವ ಪೈಪ್‌ಗಳನ್ನು ಕೂಡಲೇ ಒಂದು ಕಡೆ ಸಂಗ್ರಹಿಸಲು 15 ದಿನಗಳ ಕಾಲಾವಕಾಶವನ್ನು ನೀಡುತ್ತಾ, ಪೈಪ್‌ಲೈನ್ ಅಳವಡಿಸಲು ಕತ್ತರಿಸಲಾಗಿರುವ ಪಾಲಿಕೆ ರಸ್ತೆಯನ್ನು ಪ್ರಸ್ತಾವಿತ ಸುಸ್ಥಿತಿಗೆ (Restoration) ತರಬೇಕೆಂದು ಸಭೆಯಲ್ಲಿ ತಿಳಿಸಲಾಗಿರುತ್ತದೆ. ಟೀಚರ್ಸ್ ಕಾಲೋನಿಯಲ್ಲಿ ಪೈಪ್‌ಲೈನ್ ಅಳವಡಿಸಲು ರಸ್ತೆಯನ್ನು ಅಗೆಯಲಾಗಿದ್ದು, ಅಗೆಯಲಾಗಿರುವ ರಸ್ತೆಯನ್ನು 7 ದಿನದೊಳಗಾಗಿ ಸರಿಪಡಿಸುವುದಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಸಭೆಗೆ ತಿಳಿಸಿದರು.

3) ಗಾಳಿ ಮಳೆಗೆ ಬಿದ್ದಿರುವ ಮರ ಮತ್ತು ಒಣಗಿದ ಮರದ ಕೊಂಬೆಗಳನ್ನು ಪಾಲಿಕೆಯ ಅರಣ್ಯ ಇಲಾಖೆ ವತಿಯಿಂದ ಕೂಡಲೇ ರಸ್ತೆ ಬದಿಯಿಂದ ತೆರವುಗೊಳಿಸಿ ನಿಗಧಿತ ಸ್ಥಳದಲ್ಲಿ ಸಂಗ್ರಹಿಸಲು ಸೂಚಿಸಲಾಯಿತು.

Scanned by CamScanner

4) ಘನತ್ಯಾಜ್ಯ ಇಲಾಖೆಯಿಂದ ನಿಗಧಿತ ಸಮಯದಲ್ಲಿ ಕಸ ವಿಲೇವಾರಿಯಾಗುತ್ತಿರುವ ಬಗ್ಗೆ ಕೇಳಿದಾಗ ಸ್ಥಳದಲ್ಲಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರುಗಳು ಇಂದು ಕಸ ನಿರ್ವಹಣೆ ಘಟಕದಲ್ಲಿ ಸಮಸ್ಯೆ ಇರುವ ಕಾರಣ ಇಂದು ಕಸ ವಿಲೇವಾರಿ ಆಗಿರುವುದಿಲ್ಲವೆಂದು ಸಭೆ ತಿಳಿಸಿದಾಗ ಮಾನ್ಯ ಕಂದಾಯ ಸಚಿವರು ರವರು ಮಾತನಾಡಿ ಹೊಸದಾಗಿ ಕಸ ನಿರ್ವಹಣೆ ಘಟಕ ಸ್ಥಾಪಿಸಲು ಅನುವು ಮಾಡಿಕೊಂಡಿದ್ದು, ಕೂಡಲೇ ಕಸ ವಿಲೇವಾರಿ ಸಮಸ್ಯೆಯನ್ನು ಬಗ್ಗೆ ಹರಿಸುವುದಾಗಿ ಸಭೆಗೆ ಸೂಚಿಸಲಾಗಿರುತ್ತದೆ.

5) ರಸ್ತೆಮೂಲಭೂತ ಸೌಕರ್ಯ ಇಲಾಖೆಯ ವತಿಯಿಂದ ನಿರ್ವಹಿಸಲಾಗುತ್ತಿರುವ ಕಾಮಗಾರಿಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು ಹಾಗೂ 18ನೇ ಮುಖ್ಯರಸ್ತೆಯಲ್ಲಿ ಪೈಪ್‌ಲೈನ್ ಅಳವಡಿಸುವುದಾಗಿ ತಿಳಿಸಿರುತ್ತಾರೆ ಆದರೆ ಇದುವರೆಗೂ ಪೈಪ್‌ಲೈನ್ ಅಳವಡಿಸುವ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದಾಗ ಸಭೆಯಲ್ಲಿದ್ದ ಬಿ.ಡಬ್ಲ್ಯೂ.ಎಸ್.ಎಸ್ ಅಧಿಕಾರಿಗಳು ಪೈಪ್‌ಲೈನ್ ಅಳವಡಿಸಲು 2 ದಿವಸಗಳಲ್ಲಿ ಕಾಮಗಾರಿಯನ್ನು ಪ್ರಾರಂಭಿಸುವುದಾಗಿ ಸಭೆಗೆ ತಿಳಿಸಿ ಒಂದು ವಾರದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ. ಮುಂದುವರೆದಂತೆ ಕದಿರೇನಹಳ್ಳಿ ಮುಖ್ಯರಸ್ತೆಯಲ್ಲಿ ನೀರು ಸೋರಿಕೆಯಾಗುತ್ತಿದ್ದು ಎರಡು ಕಡೆಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯಿಂದ ದುರಸ್ಥಿ ಪಡಿಸಬೇಕಾಗಿರುವುದರಿಂದ ರಸ್ತೆಯನ್ನು ಅಗೆಯುವ ಸಂದರ್ಭದಲ್ಲಿ ಟ್ರಾಫಿಕ್ ಸಮಸ್ಯೆ ಬಗ್ಗೆ ಚರ್ಚಿಸಿದಾಗ ಸಭೆಯಲ್ಲಿದ್ದ ಸಂಚಾರಿ ಠಾಣಾಧಿಕಾರಿಗಳು ರಸ್ತೆಯನ್ನು ಅಗೆಯುವ ಸಂದರ್ಭದಲ್ಲಿ ನಮ್ಮ ಇಲಾಖೆಯ ಗಮನಕ್ಕೆ ತಂದಾಗ ಕೂಡಲೇ ಬದಲಿ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

6) ವಾರ್ಡ್ ಸಂಖ್ಯೆ-181 ರಲ್ಲಿ ಕುಮಾರಸ್ವಾಮಿ ಬಡಾವಣೆಯಲ್ಲಿ ಅಂಗಡಿಯವರು ಪಾದಚಾರಿ ಮಾರ್ಗದಲ್ಲಿ ಸಾಮಾಗ್ರಿಗಳನ್ನು ಇಡಲಾಗಿದ್ದು, ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿರುವುದಾಗಿ ಮಾನ್ಯ ಕಂದಾಯ ಸಚಿವರು ಸಭೆಯಲ್ಲಿ ತಿಳಿಸಿದಾಗ ಸಭೆಯಲ್ಲಿದ್ದ ಆರೋಗ್ಯ ವೈದ್ಯಾಧಿಕಾರಿಗಳು ಅಂಗಡಿಗಳಿಗೆ ಎಚ್ಚರಿಕೆಯನ್ನು ನೀಡಿ ಪದೇ ಪದೇ ಪುನರಾವರ್ತನೆಯಾದಲ್ಲಿ ಪರವಾನಿಗಿಯನ್ನುರದ್ದು ಪಡಿಸುವಂತೆ ಸಭೆಯಲ್ಲಿ ತಿಳಿಸಿರುತ್ತಾರೆ.

7) ಕಾರ್ಯಪಾಲಕ ಅಭಿಯಂತರರು (ದಕ್ಷಿಣ) ರವರ ಕಛೇರಿಯಿಂದ ನಿರ್ವಹಿಸುತ್ತಿರುವ ಕಾಮಗಾರಿಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು ಹಾಗೂ ಉದ್ಯಾನವನಗಳ ಕಾಮಗಾರಿಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

8) ವಾರ್ಡ್‌ಗಳ ಸಮಸ್ಯೆ ಬಗ್ಗೆ ಸಭೆಯಲ್ಲಿ ಕೇಳಿದಾಗ, ವಾರ್ಡ್ ಸಂಖ್ಯೆ-183 ರಲ್ಲಿ 2ನೇ ಎ ಮುಖ್ಯರಸ್ತೆಯಲ್ಲಿ ಚರಂಡಿ ಮತ್ತು ಸಿಮೆಂಟ್ ಕಾಂಕ್ರೀಟ್ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗಿದ್ದು, ಈ ರಸ್ತೆಯ ಮಧ್ಯೆ ಇರುವ 80 x 25 ಅಡಿ ಅಳತೆ ನಿವೇಶನ ಇದ್ದು, ಈ ನಿವೇಶನದ ಮಧ್ಯದಲ್ಲಿ ನೀರಿನ ಹರಿವು ಇರುವುದರಿಂದ 80 x 2 ಅಡಿ ಉದ್ದಕ್ಕೆ ಚರಂಡಿ ಅಭಿವೃದ್ಧಿಯನ್ನು ಅಭಿವೃದ್ಧಿ ಪಡಿಸಿದಾಗ ಸ್ಥಳೀಯ ನಿವಾಸಿಗಳಿಗೆ ತೊಂದರೆಯನ್ನು

Scanned by CamScanner

ಜಿ) ವಾರ್ಡ್ ಸಂಖ್ಯೆ-182 ಬಿ.ಹೆಚ್.ಬಿ.ಸಿ.ಎಸ್ ಲೇಔಟ್‌ನಲ್ಲಿ ಕೇಬಲ್ ಅಳವಡಿಕೆಯಿಂದ ರಸ್ತೆ ಗುಂಡಿ ಬಿದ್ದಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಿದಾಗ, ಸಭೆಯಲ್ಲಿದ್ದ ವಾರ್ಡ್ ಅಧಿಕಾರಿಗಳು ಕೇಬಲ್ ಅಳವಡಿಕೆಯಿಂದ ಬಿದ್ದಿರುವ ಗುಂಡಿಯನ್ನು ಕೂಡಲೇ ಸರಿಪಡಿಸುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

ಹೆಚ್) ವಾರ್ಡ್ ಸಂಖ್ಯೆ-165 ರ ಗಣೇಶಮಂದಿರ ವಾರ್ಡ್ 34ನೇ ಅಡ್ಡರಸ್ತೆಯ 13ನೇ ಮುಖ್ಯರಸ್ತೆಯಲ್ಲಿ ದೊಡ್ಡ ಮಳೆ ನೀರು ಚರಂಡಿ ಸಮಸ್ಯೆ ಬಗ್ಗೆ ಕಿಶೋರ್‌ರವರು ದೂರು ನೀಡಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಿದಾಗ ಸಭೆಯಲ್ಲಿ ದೊಡ್ಡ ಮಳೆ ನೀರು ಚರಂಡಿ ಅಧಿಕಾರಿಗಳು ಕೂಡಲೇ ಸ್ಥಳವನ್ನು ಪರಿಶೀಲಿಸಿ ಸಮಸ್ಯೆಯನ್ನು ಬಗೆಹರಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.

ಐ) ವಾರ್ಡ್ ಸಂಖ್ಯೆ-183 ರ ಚಿಕ್ಕಲ್ಲಸಂದ್ರ ವಾರ್ಡ್ ಸಿಂಡಿಕೇಟ್ ಬ್ಯಾಂಕ್ ಕಾಲೋನಿ 1, 2, 3 ಮತ್ತು 4ನೇ ರಸ್ತೆಯನ್ನು ಸರಿಯಾಗಿ ಸ್ವಚ್ಛಗೊಳಿಸುತ್ತಿಲ್ಲವೆಂದು ಸತೀಶ್ ಚಟ್ಟುಮಧುರವರು ದೂರು ನೀಡಿರುವುದನ್ನು ಸಭೆಯಲ್ಲಿ ತಿಳಿಸಿದಾಗ, ಸಭೆಯಲ್ಲಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರವರು ಮಾತನಾಡಿ ಸದರಿ ರಸ್ತೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪೌರಕಾರ್ಮಿಕರು ವಯೋ ನಿವೃತ್ತಿ ಹೊಂದಿರುವುದಾಗಿ ಸಭೆಗೆ ತಿಳಿಸಿದಾಗ ಮಾನ್ಯ ಕಂದಾಯ ಸಚಿವರು ಮಾತನಾಡಿ ಬೇರೆ ಪೌರಕಾರ್ಮಿಕರನ್ನು ನಿಯೋಜಿಸುವಂತೆ ಸೂಚಿಸಿರುತ್ತಾರೆ.

ಜೆ) ವಾರ್ಡ್ ಸಂಖ್ಯೆ-161 ರ ಮೂಕಾಂಬಿಕಾನಗರ 10ನೇ ರಸ್ತೆ ಟಾರ್ ಹಾಕಬೇಕಾಗಿರುತ್ತದೆಂದು ವಿನಯ್ ರವರು ದೂರು ನೀಡಿರುವುದಾಗಿ ಸಭೆಯಲ್ಲಿ ಚರ್ಚಿಸಿದಾಗ ಸಭೆಯಲ್ಲಿದ್ದ ವಾರ್ಡ್ ಅಧಿಕಾರಿಗಳು ಸದರಿ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

ಕೆ) ವಾರ್ಡ್ ಸಂಖ್ಯೆ-183 ರ ಚಿಕ್ಕಲ್ಲಸಂದ್ರ 2ನೇ ಎ ಮುಖ್ಯರಸ್ತೆ ಅಂಜನೇಯ ಟೆಂಪಲ್ ರಸ್ತೆಯ ಮೋರಿ ಕ್ಲೀನ್ ಮಾಡಬೇಕಾಗಿರುವುದಾಗಿ ಸಭೆಯಲ್ಲಿ ತಿಳಿಸಿದಾಗ ಸಭೆಯಲ್ಲಿದ್ದ ವಾರ್ಡ್ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಪದ್ಮನಾಭನಗರ ರವರು ಮಾತನಾಡಿ ಕಾಮಗಾರಿಯು ಈಗಾಗಲೇ ಪ್ರಾರಂಭಿಸಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

ಎಲ್) ವಾರ್ಡ್ ಸಂಖ್ಯೆ-181 ರ ವಾಜಪೇಯಿ ಪಾರ್ಕ್ ಕುಮಾರಸ್ವಾಮಿ ಲೇಔಟ್‌ನಲ್ಲಿ ಗ್ರಿಲ್ ಅಳವಡಿಕೆ ಮತ್ತು ಸ್ವಚ್ಛತಾ ಕಾರ್ಯ ಸರಿಯಾಗಿರುವುದಿಲ್ಲವೆಂದು ಪ್ರಸಾದ್ ರವರು ದೂರು ನೀಡಿರುವುದಾಗಿ ಸಭೆಯಲ್ಲಿ ತಿಳಿಸಿದಾಗ ಸಭೆಯಲ್ಲಿದ್ದ ಯೋಜನೆ (ದಕ್ಷಿಣ) ರವರ ಅಧಿಕಾರಿಗಳು ಮಾತನಾಡಿ ಕಾಮಗಾರಿಯು ಪ್ರಗತಿಯಲ್ಲಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

ಎಂ) ವಾರ್ಡ್ ಸಂಖ್ಯೆ-181 ರ ಕುಮಾರಸ್ವಾಮಿ ಬಡಾವಣೆಯಲ್ಲಿನ 15 ಎಫ್ ಬಸ್ ಸ್ಟಾಪ್ ಹತ್ತಿರ 1 ರಿಂದ 10ನೇ ಕ್ರಾಸ್ ವರೆಗೆ ಹೊಸ ಬೀದಿ ದೀಪಗಳ ಅಳವಡಿ ಮಾಡಬೇಕೆಂದು ಸಾರ್ವಜನಿಕರು ದೂರು ನೀಡುವುದಾಗಿ ಸಭೆಯಲ್ಲಿ ತಿಳಿಸಿದಾಗ ಸಹಾಯಕ ಅಭಿಯಂತರರು ವಿದ್ಯುತ್ ರವರು ಸ್ಥಳವನ್ನು ಪರಿಶೀಲಿಸಿ ಕೂಡಲೇ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.

ಎನ್) ವಾರ್ಡ್ ಸಂಖ್ಯೆ-161 ರ ಹೊಸಕೆರೆಯಲ್ಲಿ ವೇಲನ್‌ಟೈನ್ ಮಾಡೆಲ್ ಸ್ಕೂಲ್ ಹತ್ತಿರ ಕಸದ ಸಮಸ್ಯೆ ಬಗ್ಗೆ ದೂರು ನೀಡಿರುವುದಾಗಿ ಸಭೆಯಲ್ಲಿ ತಿಳಿಸಿದಾಗ, ಹಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ರವರು

ತಪ್ಪಿಸಬಹುದೆಂದು ಸಭೆಗೆ ತಿಳಿಸಿದಾಗ, ಸಭೆಯಲ್ಲಿದ್ದ ಕಂದಾಯ ಅಧಿಕಾರಿಗಳೊಂದಿಗೆ ಮಾನ್ಯ ಕಂದಾಯ ಸಚಿವರು ಹಾಗೂ ಶಾಸಕರು ರವರು ಮಾತನಾಡಿ ಸ್ವತ್ತಿನ ಮಾಲೀಕರೊಂದಿಗೆ ಮಾತನಾಡಿ ಕೂಡಲೇ ಸಮಸ್ಯೆಯನ್ನು ಬಗೆಹರಿಸುವಂತೆ ಸಭೆಗೆ ತಿಳಿಸಿರುತ್ತಾರೆ.

9) ಪದ್ಮನಾಭನಗರ ವಿಧಾನ ಸಭಾ ಕ್ಷೇತ್ರದ ಪ್ರಮುಖ ಸಮಸ್ಯೆಗಳ ಈ ಕೆಳಕಂಡ ಪಟ್ಟಿಯ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಎ) ವಾರ್ಡ್ ಸಂಖ್ಯೆ-181 ಕುಮಾರಸ್ವಾಮಿ ಬಡಾವಣೆ, ಬೇಂದ್ರೇನಗರ 15ನೇ ಅಡ್ಡರಸ್ತೆಗೆ 6 ತಿಂಗಳಿನಿಂದ ಟಾರ್ ಹಾಕಿರುವುದಿಲ್ಲವೆಂದು ಶ್ರೀ ಹನುಮಂತೇಗೌಡರು ದೂರು ನೀಡಿರುವುದಾಗಿ ಸಭೆಯಲ್ಲಿ ತಿಳಿಸಿದಾಗ, ಸಭೆಯಲ್ಲಿದ್ದ ವಾರ್ಡ್ ಅಧಿಕಾರಿಗಳು ಸದರಿ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಕಾರ್ಯಾದೇಶವನ್ನು ನೀಡಿದ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

ಬಿ) ವಾರ್ಡ್ ಸಂಖ್ಯೆ-181 ಕುಮಾರಸ್ವಾಮಿ ಬಡಾವಣೆ 65ನೇ ಅಡ್ಡರಸ್ತೆಯಲ್ಲಿ ಮರದ ಕೊಂಬೆಗಳನ್ನು ಕತ್ತರಿಸಬೇಕಾಗಿರುತ್ತದೆ ಎಂದು ಬಿಡ್ಡಿಯವರು ದೂರು ನೀಡಿರುವುದಾಗಿ ಸಭೆಯಲ್ಲಿ ಚರ್ಚಿಸಿದಾಗ ಸಭೆಯಲ್ಲಿದ್ದ ವಲಯ ಅರಣ್ಯಾಧಿಕಾರಿಗಳು ಕೂಡಲೇ ಸ್ಥಳವನ್ನು ಪರಿಶೀಲಿಸಿ ಸಮಸ್ಯೆಯನ್ನು ಬಗೆಹರಿಸುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ ಮತ್ತು ಬೀದಿ ದೀಪಗಳನ್ನು ಅಳವಡಿಸಬೇಕೆಂದು ದೂರು ನೀಡಿರುವುದಾಗಿ ಸಭೆಯಲ್ಲಿ ತಿಳಿಸಿದಾಗ ಸ್ಥಳದಲ್ಲಿದ್ದ ಸಹಾಯಕ ಅಭಿಯಂತರರು ವಿದ್ಯುತ್ ರವರು ಕೂಡಲೇ ಬೀದಿ ದೀಪವನ್ನು ಸರಿಪಡಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.

ಸಿ) ವಾರ್ಡ್ ಸಂಖ್ಯೆ-161 ರ ದತ್ತಾತ್ರೇಯನಗರ ರಸ್ತೆಯಲ್ಲಿರುವ ವಿದ್ಯುತ್ ದೀಪದ ಕಂಬ ಶಿಥಿಲಾವಸ್ಥೆಯಲ್ಲಿರುವುದಾಗಿ ಕೇಶವ್ ರವರು ದೂರು ನೀಡಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಿದಾಗ, ಬೆಸ್ಕಾಂ ಇಲಾಖೆಯ ಅಧಿಕಾರಿಗಳು ಕೂಡಲೇ ಶಿಥಿಲಗೊಂಡಿರುವ ವಿದ್ಯುತ್ ಕಂಬವನ್ನು ಬದಲಿಸುವಾಗಿ ಸಭೆಗೆ ತಿಳಿಸಿರುತ್ತಾರೆ.

ಡಿ) ವಾರ್ಡ್ ಸಂಖ್ಯೆ-165 ರ ಬನಗಿರಿನಗರದಲ್ಲಿ ಒಣಗಿದ ಕಸ ಸರಿಯಾಗಿ ತೆಗೆಯುತ್ತಿಲ್ಲವೆಂದು ಸುರೇಶ್ ರವರು ದೂರು ನೀಡಿರುತ್ತಾರೆಂದು ಸಭೆಗೆ ತಿಳಿಸಿದಾಗ, ಸಭೆಯಲ್ಲಿದ್ದ ಘನತ್ಯಾಜ್ಯ ನಿರ್ವಹಣೆ ಕಿರಿಯ ಆರೋಗ್ಯ ಪರಿವೀಕ್ಷಕರವರು ಕೂಡಲೇ ಸಮಸ್ಯೆಯನ್ನು ಬಗೆಹರಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.

ಇ) ವಾರ್ಡ್ ಸಂಖ್ಯೆ-181 ರ ಕುಮಾರಸ್ವಾಮಿ ಬಡಾವಣೆ 50 ಅಡಿ ರಸ್ತೆಯಲ್ಲಿ ಗುಂಡಿ ಬಿದ್ದಿರುವುದಾಗಿ ಹನುಮಂತೇಗೌಡರು ದೂರು ನೀಡಿರುವುದಾಗಿ ಸಭೆಯಲ್ಲಿ ತಿಳಿಸಿದಾಗ, ಸ್ಥಳದಲ್ಲಿ ಅಧಿಕಾರಿಗಳು ಕೂಡಲೇ ಸಮಸ್ಯೆಯನ್ನು ಬಗೆಹರಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.

ಎಫ್) ವಾರ್ಡ್ ಸಂಖ್ಯೆ-180 ರ ಪ್ರಗತಿಪುರ 6ನೇ ಅಡ್ಡರಸ್ತೆಯಲ್ಲಿ ವಿದ್ಯುತ್ ದೀಪದ ಕಂಬ ಶಿಥಿಲಾವಸ್ಥೆಯಲ್ಲಿರುವುದಾಗಿ ನರಸಿಂಹಮೂರ್ತಿ ರವರು ದೂರು ನೀಡಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಿದಾಗ, ಬೆಸ್ಕಾಂ ಇಲಾಖೆಯ ಅಧಿಕಾರಿಗಳು ಕೂಡಲೇ ಶಿಥಿಲಗೊಂಡಿರುವ ವಿದ್ಯುತ್ ಕಂಬವನ್ನು ಬದಲಿಸುವಾಗಿ ಸಭೆಗೆ ತಿಳಿಸಿರುತ್ತಾರೆ.

Scanned by CamScanner

ಮಾತನಾಡಿ ಖಾಲಿ ನಿವೇಶನವಿದ್ದು, ಈ ನಿವೇಶನದಲ್ಲಿ ಬಿದ್ದಿರುವ ಕಸದ ರಾಶಿಯನ್ನು ಕೂಡಲೇ ತೆರವು ಮಾಡುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

ಓ) ವಾರ್ಡ್ ಸಂಖ್ಯೆ-182 ರ ಕಾರ್ಮೆಲ್ ಗ್ರೌಂಡ್ ಪಕ್ಕದ ರಸ್ತೆಯಲ್ಲಿ ಪಾದಚಾರಿ ಮಾರ್ಗದ ಸಮಸ್ಯೆ ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಗ್ರೂಪ್ ರವರು ದೂರು ನೀಡಿರುವುದಾಗಿ ಸಭೆಯಲ್ಲಿ ಚರ್ಚಿಸಿದಾಗ ಸಭೆಯಲ್ಲಿದ್ದ ವಾರ್ಡ್ ಅಭಿಯಂತರರು ಸ್ಥಳವನ್ನು ಪರಿಶೀಲಿಸಿ ಕೂಡಲೇ ಸಮಸ್ಯೆಯನ್ನು ಬಗೆಹರಿಸುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

ಪಿ) ವಾರ್ಡ್ ಸಂಖ್ಯೆ-182 ರ ಕಾರ್ಮೆಲ್ ಸ್ಕೂಲ್ ಮತ್ತು ಅಕ್ಕಪಕ್ಕದ ರಸ್ತೆಗಳು ಹಾಗೂ ಯಡಿಯೂರು ಕೆರೆ ಹತ್ತಿರ ಬೀದಿ ನಾಯಿಗಳ ಸಮಸ್ಯೆ ಬಗ್ಗೆ ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಗ್ರೂಪ್ ರವರು ದೂರು ನೀಡಿರುವುದಾಗಿ ಸಭೆಗೆ ತಿಳಿಸಿದಾಗ, ಸಂಬಂಧ ಅಧಿಕಾರಿಗಳಿಗೆ ತಿಳಿಸಿ ಕೂಡಲೇ ಸಮಸ್ಯೆಯನ್ನು ಬಗೆಹರಿಸುವಂತೆ ಸಭೆಯಲ್ಲಿ ತಿಳಿಸಿರುತ್ತಾರೆ.

ಕ್ಯೂ) ವಾರ್ಡ್ ಸಂಖ್ಯೆ-166 ರ ಕರೀಸಂದ್ರ ವಾರ್ಡ್‌ನಲ್ಲಿರುವ ಅನಂತ್‌ಕುಮಾರ್ ವೃತ್ತದಲ್ಲಿನ ರಸ್ತೆ ಗುಂಡಿಗಳು ಬಿದ್ದಿರುತ್ತದೆ ಎಂದು ಮುನೇಗೌಡ ರವರು ದೂರು ನೀಡಿರುವುದನ್ನು ಸಭೆಯ ಗಮನಕ್ಕೆ ತಂದಾಗ, ಸಭೆಯಲ್ಲಿದ್ದ ವಾರ್ಡ್ ಅಭಿಯಂತರರು ಕೂಡಲೇ ಬಿದ್ದಿರುವ ರಸ್ತೆ ಗುಂಡಿಗಳನ್ನು ಮುಚ್ಚುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

ಆರ್) ವಾರ್ಡ್ ಸಂಖ್ಯೆ-183 ರ ಕಾಮಾಕ್ಯ ರಸ್ತೆ ವಿಕಾಸ್ ಸ್ಕೂಲ್ ಹಿಂಭಾಗ 5ನೇ ರಸ್ತೆ, ಸ್ಯಾನಿಟರಿ ಲೈನ್ ಬ್ಲಾಕ್ ಆಗಿರುವುದಾಗಿ ಸಾರ್ವಜನಿಕರು ದೂರು ನೀಡಿರುವುದಾಗಿ ಸಭೆ ತಿಳಿಸಿದಾಗ ಸಭೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಕೂಡಲೇ ಸಮಸ್ಯೆಯನ್ನು ಬಗೆಹರಿಸುವುದಾಗಿ ಸಭೆಗೆ ತಿಳಿಸಿದರು.

ಎಸ್) ವಾರ್ಡ್ ಸಂಖ್ಯೆ-165 ರ ದೇವೇಗೌಡ ಪೆಟ್ರೋಲ್ ಬಂಕ್ ಪಕ್ಕದಲ್ಲಿನ ಖಾಲಿ ಜಾಗದಲ್ಲಿ ಕಸ ಸುರಿಯುತ್ತಿರುತ್ತಾರೆ ಕಾಂಪೌಂಡ್‌ಗೆ ಗೇಟ್ ನಿರ್ಮಿಸಿ ಅಲ್ಲಿ ನಡೆಯುತ್ತಿರುವ ಕಾನೂನು ಬಾಹಿರ ಚಟುವಟಿಕೆ ನಿಯಂತ್ರಿಸುವಂತೆ ಶ್ರೀ ಶಾಂತರಾಮ್ ಪದ್ಮನಾಭನಗರ ನಾಗರೀಕರ ವೇದಿಕೆ ರವರು ದೂರು ನೀಡಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಿದಾಗ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸಮಸ್ಯೆಯನ್ನು ಬಗೆಹರಿಸುವಂತೆ ವಾರ್ಡ್ ಸಮಿತಿ ಸಭೆಯಲ್ಲಿ ಸೂಚಿಸಿದರು.

ಟಿ) ವಾರ್ಡ್ ಸಂಖ್ಯೆ-183 ರ ಶ್ರೀನಿವಾಸನಗರ 2ನೇ ಎ ಮುಖ್ಯರಸ್ತೆ ಇಟ್ಟುಮಡು ಬನಶಂಕರಿ 3ನೇ ಹಂತ ಇದ್ದಿರುವ ಕಾಂಕ್ರೀಟ್ ರಸ್ತೆಯ ಬದಲಿಗೆ ಡಾಂಬರ್ ರಸ್ತೆ ಮಾಡುವಂತೆ ಶ್ರೀ ಕೆ.ನಿರಂಜನ್ ರವರು ಕೋರಿರುವುದಾಗಿ ಸಭೆಗೆ ತಿಳಿಸಿದಾಗ ಸಭೆಯಲ್ಲಿದ್ದ ವಾರ್ಡ್‌ನ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರವರು ಮಾತನಾಡಿ ಸದರಿ ರಸ್ತೆಯನ್ನು ಈಗಾಗಲೇ ಸಿಮೆಂಟ್ ಕಾಂಕ್ರೀಟ್ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಲು ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡಿರುವುದಾಗಿ ಸಭೆಯ ಗಮನಕ್ಕೆ ತಂದಾಗ, ಮಾನ್ಯ ಕಂದಾಯ ಸಚಿವರು ಮಾತನಾಡಿ ಒಳ್ಳೆಯ ಗುಣಮಟ್ಟದ ಕಾಂಕ್ರೀಟ್ ಅನ್ನು ಹಾಕಲು ಸಭೆಯಲ್ಲಿ ತಿಳಿಸಿರುತ್ತಾರೆ.

ಮಾನ್ಯ ಆಯುಕ್ತರವರ ಸೂಚನೆಯಂತೆ ಪ್ರತಿ ಒಂದನೇ ಹಾಗೂ ಮೂರನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲು ಕೋರುತ್ತಾ ಮತ್ತು ಮುಂದಿನ ಸಭೆಯಲ್ಲಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್

ರವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಿಸಲು ಸಂಚಾಲಕರಿಗೆ ಸೂಚಿಸಿ ಸಭೆಯಲ್ಲಿ ಯಾವುದೇ ಪ್ರಸ್ತಾವನೆ ಮಂಡಿಸದಿದ್ದ ಕಾರಣ ಮಾನ್ಯ ಶಾಸಕರು, ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ಹಾಗೂ ಕರ್ನಾಟಕ ಸರ್ಕಾರದ ಕಂದಾಯ ಸಚಿವರವರಾದ ಮಾನ್ಯ ಶ್ರೀ ಆರ್.ಅಶೋಕ ರವರ ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ಸಂಚಾಲಕರು

W-181

ನೋಡಲ್ ಅಧಿಕಾರಿ/ವಾರ್ಡ್ ಸಮಿತಿ ಅಧ್ಯಕ್ಷರು.